Part 02

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 137 (170)
ಸದಸ್ಯರ ಹೆಸರು : ಶ್ರೀ ಹೆಚ್.ಎಂ. ರಮೇಶ್ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 03.03.2020
ಉತ್ತರಿಸುವವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

| ಕ್ರಂ.ಸ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ಕೈಗಾರಿಕಾ ವಸಾಹತುಗಳ ಸದ್ಯದ ಸ್ಥಿತಿಗತಿಗಳೇನು; ಕೈಗಾರಿಕಾ ಪ್ರದೇಶದ ಸಮಗ್ರ ಅಭಿವೃದ್ಧಿಗೆ ಸರ್ಕಾರದ ಬಳಿ ಯಾವ ಯೋಜನೆಯಿದೆ; ಹೊಸ ಕೈಗಾರಿಕಾ ಪ್ರದೇಶ ಸ್ಥಾಪನೆಯ ಯೋಜನೆ ಇದೆಯೇ; (ಮಾಹಿತಿ ನೀಡುವುದು) | ಸಣ್ಣ ಪ್ರಮಾಣದ ಕೈಗಾರಿಕೆಗಳ ಅಭಿವೃದ್ಧಿ ಸಲುವಾಗಿ, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತವು ರಾಜ್ಯಾದ್ಯಂತ ವಿವಿಧ ಸ್ಥಳಗಳಲ್ಲಿ ಉತ್ತಮ ಗುಣಮಟ್ಟದ ಮೂಲಭೂತ ಸೌಕರ್ಯಗಳನ್ನೊಳಗೊಂಡಂತೆ (ಚರಂಡಿ ವ್ಯವಸ್ಥೆ, ರಸ್ತೆ, ನೀರು ಪೂರೈಕೆ & ಬೀದಿ ದೀಪಗಳು) ಈವರೆವಿಗೂ ಒಟ್ಟು 188 ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಿ ನಿವೇಶನ/ಮಳಿಗೆಗಳನ್ನು ಅಭಿವೃದ್ಧಿಪಡಿಸಿ/ನಿರ್ಮಿಸಿ ನಿಗಮದ ಮಳಿಗೆ/ನಿವೇಶನಗಳ ಹಂಚಿಕೆ ನಿಯಮಾವಳಿಗಳನ್ವಯ ಅರ್ಹ ಉದ್ದಿಮೆದಾರರಿಗೆ ಹಂಚಿಕೆ ಮಾಡಿರುತ್ತದೆ.<br><br>ರಾಜ್ಯದ 2018-19 ರ ಆಯವ್ಯಯ ಭಾಷಣದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಘೋಷಿಸಿರುವಂತೆ ರಾಜ್ಯದಲ್ಲಿ 11 ಹೊಸ ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸುವ ಸಂಬಂಧ ಸೂಕ್ತ ಜಮೀನಿನ ಮಂಜೂರಾತಿ ಕೋರಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಈಗಾಗಲೇ ಪ್ರಸ್ತಾವನೆಗಳನ್ನು ಸಲ್ಲಿಸಲಾಗಿರುತ್ತದೆ. ಅಲ್ಲದೇ ರಾಜ್ಯದ ಪ್ರತಿ ಜಿಲ್ಲೆ ಹಾಗೂ ತಾಲ್ಲೂಕು ಪ್ರದೇಶಗಳಲ್ಲಿ ಹೊಸ ಕೈಗಾರಿಕಾ ವಸಾಹತುವನ್ನು ಸ್ಥಾಪಿಸುವ ಸಲುವಾಗಿ ಕನಿಷ್ಟ 10 ಎಕರೆ ಜಮೀನನ್ನು ನಿಗಮಕ್ಕೆ ಮಂಜೂರು ಮಾಡುವಂತೆ ಕೋರಿ ಸಂಬಂಧಪಟ್ಟ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಈ ಬಗ್ಗೆ ಅವರಿಂದ ಪ್ರತಿಕ್ರಿಯೆ ಸ್ವೀಕರಿಸಿದ ತರುವಾಯ ಮುಂದಿನ ಅವಶ್ಯ ಕ್ರಮ ಜರುಗಿಸಲಾಗುವುದು.<br><br>ಮುಂದುವರೆದಂತೆ, ಸರ್ಕಾರದ ಅನುದಾನದಡಿಯಲ್ಲಿ ನಿಗಮದ ಎಲ್ಲಾ ಕೈಗಾರಿಕಾ ವಸಾಹತುಗಳಲ್ಲಿನ ಮೂಲಭೂತ ಸೌಕರ್ಯಗಳನ್ನು ಮೇಲ್ದರ್ಜೆಗೇರಿಸುವ ಕಾರ್ಯಕ್ರಮವನ್ನು ನಿಗಮವು ಹಮ್ಮಿಕೊಂಡಿರುತ್ತದೆ. ಹಾಗೂ ಈಗಾಗಲೇ 54 |

| ಕ್ರಂ.ಸ. | ಪ್ರಶ್ನೆ | ಉತ್ತರ |
|---|---|---|
| | | ಸಂಖ್ಯೆ ಕೈಗಾರಿಕಾ ವಸಾಹತುಗಳಲ್ಲಿನ ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ, ಬೀದಿ ದೀಪಗಳನ್ನು ಮೇಲ್ದರ್ಜೆಗೇರಿಸುವ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಸದರಿ ಅಭಿವೃದ್ಧಿ ಕಾಮಗಾರಿಗಳಿಗಾಗಿ ಈಗಾಗಲೇ ರೂ.60.00 ಕೋಟಿಗಳನ್ನು ಭರಿಸಲಾಗಿದೆ.<br><br>ಕೆ.ಐ.ಎ.ಡಿ.ಬಿ.ಗೆ ಸಂಬಂಧಿಸಿದಂತೆ, ರಾಜ್ಯಾದ್ಯಂತ ಸುಮಾರು 43719.00 ಎಕರೆಗಳ ಒಟ್ಟು 38 ಸಂಖ್ಯೆಯ ಹೊಸ ಕೈಗಾರಿಕಾ ಪ್ರದೇಶಗಳನ್ನು ಗುರುತಿಸಲಾಗಿದ್ದು, ಕೈಗಾರಿಕಾ ಪ್ರದೇಶಗಳ ವಿವರಗಳನ್ನು **ಅನುಬಂಧ–1** ರಲ್ಲಿ ಲಗತ್ತಿಸಲಾಗಿದೆ. |
| (ಆ) | ಪೀಣ್ಯ ಕೈಗಾರಿಕಾ ಪ್ರದೇಶ ವಸಂತ ನರಸಾಪುರ ಕೈಗಾರಿಕಾ ಪ್ರದೇಶ ಹಾಗೂ ಶಿವಮೊಗ್ಗ ಸೇರಿದಂತೆ ರಾಜ್ಯದ ಹಲವು ಕೈಗಾರಿಕಾ ಪ್ರದೇಶಗಳು ಜಿಎಸ್‌ಟಿ ಅನುಷ್ಠಾನದ ನಂತರ ಸಾಕಷ್ಟು ಸಂಕಷ್ಟ ಅನುಭವಿಸಿದ್ದು ಸರ್ಕಾರದ ಗಮನದಲ್ಲಿದೆಯೇ; ಈ ಕೈಗಾರಿಕಾ ಪ್ರದೇಶಗಳ ಸದ್ಯದ ಸ್ಥಿತಿಯೇನು; ಇವುಗಳ ಪುನರ್ ಅಭಿವೃದ್ಧಿಯ ಮಾನದಂಡಗಳೇನು; | ಜಿಎಸ್‌ಟಿ ಅನುಷ್ಠಾನದ ನಂತರ ಕೆಲವು ತೊಂದರೆಗಳು ಉಂಟಾಗಿದೆಯೆಂದು ಕೈಗಾರಿಕಾ ಸಂಘ ಸಂಸ್ಥೆಗಳು ಮನವಿಯನ್ನು ಕೇಂದ್ರ ಸರ್ಕಾರದ ಸಚಿವರಿಗೆ ಸಲ್ಲಿಸಿರುತ್ತಾರೆ. ತದನಂತರದಲ್ಲಿ ಜಿಎಸ್‌ಟಿ ಪ್ರಕ್ರಿಯೆಯಲ್ಲೂ ಸಾಕಷ್ಟು ಮಾರ್ಪಾಟುಗಳನ್ನು ಮಾಡಲಾಗಿರುತ್ತದೆ. |
| (ಇ) | ಉತ್ತರ ಕರ್ನಾಟಕ ಅಥವಾ ಕಲ್ಯಾಣ ಕರ್ನಾಟಕ ಪ್ರದೇಶಗಳಲ್ಲಿ ನವ ಕೈಗಾರಿಕಾ ವಸಾಹತುಗಳ ಸ್ಥಾಪನೆಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ, ಪ್ರಸ್ತಾವನೆಯ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು? | ರಾಜ್ಯದ 2018–19 ರ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ 11 ಹೊಸ ಕೈಗಾರಿಕಾ ವಸಾಹತುಗಳ ಸ್ಥಾಪನೆಗಳ ಪೈಕಿ, ಉತ್ತರ ಕರ್ನಾಟಕದ ಧಾರವಾಡ ಜಿಲ್ಲೆ, ಮಮ್ಮೀಗಟ್ಟಿಯಲ್ಲಿ ಹಾಗೂ ಯಾದಗೀರ್ ಜಿಲ್ಲೆಯ ಕಡಚೂರು ಪ್ರದೇಶದಲ್ಲಿ ಹೊಸ ಕೈಗಾರಿಕಾ ವಸಾಹತು ಸ್ಥಾಪನೆ ಸಲುವಾಗಿ ಸೂಕ್ತ ಜಮೀನುಗಳ ಹಂಚಿಕೆ ಮಾಡಲು ನಿಗಮವು ಈಗಾಗಲೇ ಕೆ.ಐ.ಎ.ಡಿ.ಬಿ. ಸಂಸ್ಥೆಯನ್ನು ಕೋರಿದ್ದು, ಜಮೀನಿನ ಹಂಚಿಕೆಯನ್ನು ನಿರೀಕ್ಷಿಸಲಾಗಿದೆ. ಮುಂದುವರೆದಂತೆ, ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲ್ಲೂಕು, ಚಿತ್ತಾಪುರ 2ನೇ ಹಂತದ ಕೈಗಾರಿಕಾ ವಸಾಹತು ಸ್ಥಾಪನೆ ಸಂಬಂಧ ನಿಗಮವು ಈಗಾಗಲೇ 31 ಎಕರೆ ಜಮೀನನ್ನು ಪಡೆಯಲಾಗಿದ್ದು, 2019–20ನೇ ಕ್ರಿಯಾ ಯೋಜನೆಯಡಿ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ ಪ್ರಕ್ರಿಯೆ ಜಾರಿಯಲ್ಲಿದ್ದು, ವಾಸ್ತು ಶಿಲ್ಪಿಯವರಿಗೆ ಡಿಪಿಆರ್ ಸಿದ್ಧಪಡಿಸಲು ಕಾರ್ಯಾದೇಶ ನೀಡಲಾಗಿದೆ. ಹಾಗೂ ಅನುಕ್ರಮವಾಗಿ ಕೊಪ್ಪಳ ಜಿಲ್ಲೆ, ಬಸಾಪುರ ಕೈಗಾರಿಕಾ ವಸಾಹತು ಮತ್ತು ಬಳ್ಳಾರಿ ಜಿಲ್ಲೆಯ ಹರಗಿನದೋಣಿ ಕೈಗಾರಿಕಾ |

| ಕ್ರಂ.ಸ. | ಪ್ರಶ್ನೆ | ಉತ್ತರ |
| --- | --- | --- |
| | | ವಸಾಹತುವಿನ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದೆ.<br>ಇನ್ನುಳಿದೆಡೆ ಜಮೀನು ಮಂಜೂರಾದ ತದನಂತರದಲ್ಲಿ, ಕೈಗಾರಿಕಾ ವಸಾಹತು ಸ್ಥಾಪನೆ ಬಗ್ಗೆ ಮುಂದಿನ ಅವಶ್ಯ ಕ್ರಮ ಕೈಗೊಳ್ಳಲಾಗುವುದು. ಅದಲ್ಲದೆ, ರಾಜ್ಯದ ಪ್ರತಿ ಜಿಲ್ಲೆ ಹಾಗೂ ತಾಲ್ಲೂಕು ಪ್ರದೇಶಗಳಲ್ಲಿ ಹೊಸ ಕೈಗಾರಿಕಾ ವಸಾಹತುವನ್ನು ಸ್ಥಾಪಿಸುವ ಸಲುವಾಗಿ ಕನಿಷ್ಟ 10 ಎಕರೆ ಜಮೀನನ್ನು ನಿಗಮಕ್ಕೆ ಮಂಜೂರು ಮಾಡುವಂತೆ ಕೋರಿ ಸಂಬಂಧಪಟ್ಟ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಈ ಬಗ್ಗೆ ಅವರಿಂದ ಪ್ರತಿಕ್ರಿಯೆ ಸ್ವೀಕರಿಸಿದ ತರುವಾಯ ಮುಂದಿನ ಅವಶ್ಯ ಕ್ರಮ ಜರುಗಿಸಲಾಗುವುದು.<br>ಅಲ್ಲದೇ, ಕೆ.ಐ.ಎ.ಡಿ.ಬಿ. ವತಿಯಿಂದ ಉತ್ತರ ಕರ್ನಾಟಕ ಅಥವಾ ಕಲ್ಯಾಣ ಕರ್ನಾಟಕ ಪ್ರದೇಶಗಳಲ್ಲಿ ಒಟ್ಟು 10 ನವ ಕೈಗಾರಿಕಾ ವಸಾಹತುಗಳನ್ನು ಗುರುತಿಸಲಾಗಿದ್ದು, ವಿವರಗಳನ್ನು **ಅನುಬಂಧ-2** ರಲ್ಲಿ ಲಗತ್ತಿಸಲಾಗಿದೆ. |

**ಸಿಐ 28 ಸಿಎಸ್‌ಸಿ 2020**

*(ಜಗದೀಶ ಶೆಟ್ಟರ)*
**ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು**

ಅನುಬಂಧ -1

| ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ | | | |
|---|---|---|---|
| ರಾಜ್ಯದಲ್ಲಿ ಹೊಸ ಕೈಗಾರಿಕಾ ಪ್ರದೇಶಗಳ ಸ್ಥಾಪನೆ ಯೋಜನೆಯ ವಿವರಗಳು | | | |
| ಕ್ರಮ ಸಂಖ್ಯೆ | ಜಿಲ್ಲೆ | ಕೈಗಾರಿಕಾ ಪ್ರದೇಶದ ಹೆಸರು | ವಿಸ್ತೀರ್ಣ (ಎಕರೆಗಳಲ್ಲಿ) |
| 1 | ಬೆಂಗಳೂರು ಗ್ರಾಮಾಂತರ | ಕಂಬಳೀಪುರ | 302.00 |
| 2 | | ಚಿಕ್ಕುಲ್ಲೂರು | 176.00 |
| 3 | | ಹರಳೂರು ಮುದ್ದೇನಹಳ್ಳಿ | 1200.00 |
| 4 | | ದಾಬಸ್‌ಪೇಟೆ 5ನೇ ಹಂತ | 639.00 |
| 5 | | ಆದಿನಾರಾಯಣ ಹೊಸಹಳ್ಳಿ | 195.00 |
| 6 | | ಐಟಿಐಆರ್ | 2072.00 |
| 7 | ಚಿಕ್ಕಬಳ್ಳಾಪುರ | ಮಸ್ತೇನಹಳ್ಳಿ | 516.00 |
| 8 | | ಕುಡುಮಲಕುಂಟೆ | 839.00 |
| 9 | ರಾಮನಗರ | ಹಾರೋಹಳ್ಳಿ 4ನೇ ಹಂತ | 352.00 |
| 10 | | ಹಾರೋಹಳ್ಳಿ 5ನೇ ಹಂತ | 1500.00 |
| 11 | ಮಂಡ್ಯ | ಬೀಚನಹಳ್ಳಿ | 1500.00 |
| 12 | ಹಾಸನ | ರಂಗಾಪುರ ಕಾವಲ್ | 2000.00 |
| 13 | | ಐಐಟಿ | 1057.00 |
| 14 | ಚಿಕ್ಕಮಗಳೂರು | ನಗದಿಯತ್ ಕಾವಲ್ | 234.00 |
| 15 | | ಅಂಬಳೆ 2ನೇ ಹಂತ | 160.00 |
| 16 | ಶಿವಮೊಗ್ಗ | ಸೋಗಾನೆ | 604.00 |
| 17 | ದಾವಣಗೆರೆ | ಸಾರಥಿ ಕುರಬರಹಳ್ಳಿ 2ನೇ ಹಂತ | 350.00 |
| 18 | ತುಮಕೂರು | ಮಧುಗಿರಿ | 315.00 |
| 19 | | ವಸಂತನರಸಾಪುರ 4 & 5 ನೇ ಹಂತ | 4899.00 |
| 20 | | ವಸಂತನರಸಾಪುರ 6 ನೇ ಹಂತ | 4732.00 |
| 21 | | ಶಿರ 2ನೇ ಹಂತ | 1236.00 |
| 22 | ಚಿತ್ರದುರ್ಗ | ಕೆಳಕೋಟೆ 2ನೇ ಹಂತ | 87.00 |
| 23 | ಧಾರವಾಡ | ಕೋಟೂರು ಬೇಲೂರು | 594.00 |
| 24 | | ಗಾಮನಗಟ್ಟಿ-ಇಟಿಗಟ್ಟಿ | 590.00 |
| 25 | | ಚಿಕ್ಕಮಲ್ಲಿಗೆವಾಡ | 591.00 |
| 26 | | ದುರ್ಗದಕೇರಿ | 3700.00 |
| 27 | ವಿಜಯಪುರ | ಮುಳವಾಡ 2ನೇ ಹಂತ | 2500.00 |
| 28 | | ಅಲಿಯಾಬಾದ್ 3& 4 ನೇ ಹಂತ | 2210.00 |
| 29 | ಕೋಲಾರ | ವೇಮಗಲ್ 2ನೇ ಹಂತ | 520.00 |

| | | | |
|---|---|---|---|
| .30 | | ನರಸಾಪುರ 3ನೇ ಹಂತ | 810.00 |
| 31 | | ನರಸಾಪುರ 4ನೇ ಹಂತ | 875.00 |
| 32 | | ಮುಳಬಾಗಿಲು | 1569.00 |
| 33 | | ಬಾಗೇಪಲ್ಲಿ | 1000.00 |
| 34 | | ಬಡಗವರಹಳ್ಳಿ | 791.00 |
| 35 | ಬಳ್ಳಾರಿ | ಕ್ಯಾದಿಕೊಪ್ಪ | 270.00 |
| 36 | | ಸಂಜೀವರಾಯನಕೋಟೆ | 395.00 |
| 37 | ಕಲಬುರ್ಗಿ | ನಂದೂರು ಕೇಸರಟಗಿ 3ನೇ ಹಂತ | 607.00 |
| 38 | ಯಾದಗಿರಿ | ಕಡೂಚೂರು 2ನೇ ಹಂತ | 1732.00 |
| | | ಒಟ್ಟು | **43719.00** |

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಹಾಗೂ ಕಾರ್ಯನಿರ್ವಾಹಕ ಸದಸ್ಯರು

ಅನುಬಂಧ-2

**ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ**

ಉತ್ತರ ಕರ್ನಾಟಕ ಅಥವಾ ಕಲ್ಯಾಣ ಕರ್ನಾಟಕ ಪ್ರದೇಶಗಳಲ್ಲಿ ನವ ಕೈಗಾರಿಕ ವಸಾಹತು ಸ್ಥಾಪನೆಯ ವಿವರಗಳು

| ಕ್ರಮ ಸಂಖ್ಯೆ | ಜಿಲ್ಲೆ | ಕೈಗಾರಿಕಾ ಪ್ರದೇಶದ ಹೆಸರು | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| 1 | ಧಾರವಾಡ | ಕೋಟೂರು ಬೇಲೂರು | 594.00 |
| 2 | | ಗಾಮನಗಟ್ಟಿ-ಇಟಿಗಟ್ಟಿ | 590.00 |
| 3 | | ಚಿಕ್ಕಮಲ್ಲಿಗೆವಾಡ | 591.00 |
| 4 | | ದುರ್ಗದಕೇರಿ | 3700.00 |
| 5 | ವಿಜಯಪುರ | ಮುಳವಾಡ 2ನೇ ಹಂತ | 2500.00 |
| 6 | | ಅಲಿಯಾಬಾದ್ 3& 4 ನೇ ಹಂತ | 2210.00 |
| 7 | ಬಳ್ಳಾರಿ | ಕ್ಯಾದಿಕೊಪ್ಪ | 270.00 |
| 8 | | ಸಂಜೀವರಾಯನಕೋಟೆ | 395.00 |
| 9 | ಕಲಬುರ್ಗಿ | ನಂದೂರು ಕೇಸರಟಗಿ 3ನೇ ಹಂತ | 607.00 |
| 10 | ಯಾದಗಿರಿ | ಕಡೂಚೂರು 2ನೇ ಹಂತ | 1732.00 |
| | | **ಒಟ್ಟು** | **13189.00** |

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಹಾಗೂ ಕಾರ್ಯನಿರ್ವಾಹಕ ಸದಸ್ಯರು